ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Office of the Registrar (Evaluation), Central College Campus, Dr. B.R. Ambedkar Veedhi,
Bengaluru – 560 001. E-mail: registrarevlubcu@gmail.com, Ph.No.080-22295559

ಸಂಖ್ಯೆ: ಬೆಂ.ನ.ವಿ/ಪ.ವಿ/01/2023–24/12595 ದಿನಾಂಕ: 24.04.2023

## ಸುತ್ತೋಲೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಮೊದಲನೇ ಮತ್ತು ಮೂರನೇ ಸೆಮಿಸ್ಟರ್ ಸ್ನಾತಕ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಸಹಕರಿಸಿರುವುದಕ್ಕೆ ವಂದನೆಗಳು. ಇನ್ನು ಕೆಲವೇ ದಿನಗಳಲ್ಲಿ ಸ್ನಾತಕೋತ್ತರ ಪರೀಕ್ಷೆಗಳು ಆರಂಭವಾಗಲಿದ್ದು, ಅದಕ್ಕೂ ಕೂಡಾ ಇದೇ ರೀತಿ ಸಹಕಾರ ನೀಡಬೇಕೆಂದು ಕೋರುತ್ತೇನೆ.

ಸ್ನಾತಕೋತ್ತರ ಪರೀಕ್ಷೆಗಳು ಆರಂಭವಾಗುವ ಮುನ್ನ ಮುಂಜಾಗ್ರತ ಕ್ರಮವಾಗಿ ಕೆಲವು ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯ ನಿರ್ವಹಿಸುವುದು ಒಳ್ಳೆಯದು. ಏಕೆಂದರೆ, ಇದರಿಂದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ಯಾವುದೇ ತೊಂದರೆ / ಅಡೆತಡೆಯಿಲ್ಲದೇ ಪ್ರಕಟಿಸಲು ಅನುಕೂಲವಾಗುತ್ತದೆ.

1. ಎಲ್ಲಾ ವಿದ್ಯಾರ್ಥಿಗಳ ಕೋರ್ಸ್ ರಿಜಿಸ್ಟ್ರೇಶನ್ ಸರಿಯಾಗಿ ಇದೆಯೇ ಎಂಬುದನ್ನು ಪರೀಶಿಲಿಸುವುದು.
2. ವಿದ್ಯಾರ್ಥಿಗಳ ಹಾಜರಾತಿಯನ್ನು UUCMSಗೆ upload ಮಾಡುವುದು. ಹಾಜರಾತಿಯನ್ನು upload ಮಾಡುವ ಮುನ್ನ ಪ್ರಾಂಶುಪಾಲರು ಎಚ್ಚರಿಕೆ ವಹಿಸುವುದು, 'ತಪ್ಪಾಗಿ' upload ಆಗಿದೆ ಎಂದು ಪದೇ ಪದೇ ವಿಶ್ವವಿದ್ಯಾನಿಲಯಕ್ಕೆ ಸಿಬ್ಬಂದಿಯನ್ನು ಕಳುಹಿಸುವುದನ್ನು ತಡೆಯುವುದು.
3. ವಿದ್ಯಾರ್ಥಿಗಳ 'ಅಂತರಿಕ ಅಂಕಗಳನ್ನು' UUCMSಗೆ ತಪ್ಪದೇ upload ಮಾಡುವುದು.
4. 'ಹಾಜರಾತಿ' ಮತ್ತು 'ಅಂತರಿಕ ಅಂಕಗಳು' UUCMSಗೆ ಸರಿಯಾಗಿ upload ಆದನಂತರವೇ ಪ್ರವೇಶ ಪತ್ರವನ್ನು generate ಮಾಡಿಕೊಳುವುದು.

ಈ ಮೇಲೆ ತೋರಿಸಿರುವ ವಿಷಯಗಳಲ್ಲಿ ಸ್ನಾತಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳ ವಿವರಗಳನ್ನು ಒಂದುವೇಳೆ upload ಮಾಡದೇ ಇದ್ದಲ್ಲಿ. ಈ ತಿಂಗಳ 30ರೊಳಗೆ ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ. ಇದನ್ನು ಸರಿಪಡಿಸಿಕೊಳ್ಳಲು ಇದೇ ತಿಂಗಳ 15ರೊಳಗೆ ಕ್ರಮಕೈಗೊಳ್ಳಲು ತಿಳಿಸಲಾಗಿತ್ತು. ಆದರೆ, ಬಹಳಷ್ಟು ಮಹಾವಿದ್ಯಾಲಯದವರು ಈ ಬಗ್ಗೆ ಗಮನ ಹರಿಸಿರುವುದಿಲ್ಲ. ಈಗ ಮೌಲ್ಯಮಾಪನ ಕಾರ್ಯ ನಡೆಯುತ್ತರುವುದರಿಂದ ಏನಾದರೂ ನ್ಯೂನತೆಗಳು ಇನ್ನೂ ಬಾಕಿ ಇದ್ದಲ್ಲಿ ಪ್ರಾಂಶುಪಾಲರು ಅಥವಾ ಅವರ ಸಿಬ್ಬಂದಿಗಳು ಪರೀಕ್ಷಾ ವಿಭಾಗಕ್ಕೆ ಮಧ್ಯಾಹ್ನ 1.00 ಘಂಟೆಯ ಒಳಗೆ ಬೇಟಿ ನೀಡಿ ಸರಿಪಡಿಸಿಕೊಳ್ಳ ಬೇಕೆಂದು ತಿಳಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಏನಾದರೂ ತೊಂದರೆ ಆದಲ್ಲಿ ಸಂಬಂಧಿಸಿದ ಪ್ರಾಂಶುಪಾಲರೇ ಹೊಣೆಯಾಗುತ್ತಾರೆ.

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001